RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ–IVA | ಬೆಂಗಳೂರು, ಸೋಮವಾರ, ಜನವರಿ ೩೦, ೨೦೧೭ (ಮಾಘ ೧೦, ಶಕ ವರ್ಷ ೧೯೩೮) | ನಂ. ೧೨೩ |
|---|---|---|
| Part–IVA | Bengaluru, Monday, January 30, 2017 (Magha 10, Shaka Varsha 1938) | No. 123 |

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಗ್ರಾಅಪ 1181 ಗ್ರಾಪಂಅ 2016, ಬೆಂಗಳೂರು, ದಿನಾಂಕ: 25–01–2017.**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ ಪ್ರಕರಣ 3ಜಿ ರೊಂದಿಗೆ ಓದಿಕೊಂಡಂತೆ ಪ್ರಕರಣ 311 ರಲ್ಲಿ ಅಗತ್ಯಪಡಿಸಲಾದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್(ಗ್ರಾಮ ಸಭೆ ಕರೆಯುವ ಮತ್ತು ನಡೆಸುವ) ನಿಯಮಗಳು, 2016ರ ಕರಡನ್ನು ದಿನಾಂಕ:24–06–2016 ರ ಕರ್ನಾಟಕ ವಿಶೇಷ ರಾಜ್ಯ ಪತ್ರದ ಭಾಗ–IV-A ರಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗುವ ವ್ಯಕ್ತಿಗಳಿಂದ ಸದರಿ ಕರಡಿಗೆ ಆಕ್ಷೇಪಣೆ ಮತ್ತು ಸಲಹೆಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸಲ್ಲಿಸಬೇಕೆಂದು ಕೋರಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವು ಸಾರ್ವಜನಿಕರಿಗೆ ದಿನಾಂಕ:24–06–2016ರಂದು ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಸಂಬಂಧದಲ್ಲಿ ರಾಜ್ಯ ಸರ್ಕಾರಕ್ಕೆ ಸ್ವೀಕೃತವಾಗಿರುವ ಆಕ್ಷೇಪಣೆ ಅಥವಾ ಸಲಹೆಗಳನ್ನು ಪರಿಗಣಿಸಿರುವುದರಿಂದ;

ಈಗ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14)ರ 311ನೇ ಪ್ರಕರಣದೊಂದಿಗೆ ಓದಲಾದಂತೆ ಸದರಿ ಅಧಿನಿಯಮದ ಪ್ರಕರಣ 3ಜಿ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ನಿಯಮಗಳನ್ನು ರಚಿಸುತ್ತದೆ, ಎಂದರೆ;–

## ನಿಯಮಗಳು

**1. ಹೆಸರು ಮತ್ತು ಪ್ರಾರಂಭ**–(1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಸಭೆ ಕರೆಯುವ ಮತ್ತು ನಡೆಸುವ) ನಿಯಮಗಳು, 2017 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿತವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು–** ಈ ನಿಯಮಗಳ ವಿಷಯಕ್ಕೆ ಅಥವಾ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ–

(ಎ). **"ಅಧಿನಿಯಮ"** ಎಂದರೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14):

(ಬಿ). **"ಕ್ಷೇತ್ರ"** ಎಂದರೆ ಯಾವ ಕ್ಷೇತ್ರದಲ್ಲಿ ಸಂಬಂಧಿಸಿದ ಗ್ರಾಮ ಪಂಚಾಯಿತಿ ಚುನಾವಣೆಯ ಉದ್ದೇಶಕ್ಕಾಗಿ ಗ್ರಾಮದ ಯಾವ ಪ್ರದೇಶ ಒಳಗೊಂಡಿದೆಯೋ, ಅದು:

(ಸಿ). **"ಸಮಾವೇಶಕ"** ಎಂದರೆ ಗ್ರಾಮ ಪಂಚಾಯಿತಿಯ ಅಧ್ಯಕ್ಷ, ಆತನ ಗೈರು ಹಾಜರಿಯಲ್ಲಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಮತ್ತು ಅಧ್ಯಕ್ಷನು ಗ್ರಾಮ ಸಭೆ ಕರೆಯಲು ತಪ್ಪಿದಲ್ಲಿ ಕಾರ್ಯನಿರ್ವಾಹಣಾಧಿಕಾರಿ ಗ್ರಾಮ ಸಭೆಯ ಸಮಾವೇಶಕರಾಗಿರತಕ್ಕದ್ದು.

(ಡಿ). **"ಗ್ರಾಮ ಸಭೆಯ ಸದಸ್ಯರು"** ಎಂದರೆ ಸಂಬಂಧಿತ ಗ್ರಾಮ ಪಂಚಾಯಿತಿ ಪ್ರದೇಶದ ಒಳಗೆ ಇರುವ ಗ್ರಾಮಕ್ಕೆ ಸಂಬಂಧಿಸಿದ ಮತದಾರರ ಪಟ್ಟಿಯಲ್ಲಿ ನೋಂದಾಯಿತ ವ್ಯಕ್ತಿಗಳು.

(ಇ). **"ಅಧ್ಯಕ್ಷ"** ಎಂದರೆ ಗ್ರಾಮ ಪಂಚಾಯತಿ ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಅಥವಾ ಗ್ರಾಮಸಭೆಯ ಅಧ್ಯಕ್ಷತೆಯನ್ನು ಯಾರು ವಹಿಸುತ್ತಾರೋ ಅಂತಹ ಗ್ರಾಮ ಪಂಚಾಯಿತಿಯ ಸದಸ್ಯ;

**(ಎಫ್). "ಪ್ರಕರಣ"** ಎಂದರೆ ಅಧಿನಿಯಮ ಪ್ರಕರಣ;

(ಜಿ). **"ಕಾರ್ಯನಿರ್ವಾಹಕ ಅಧಿಕಾರಿ"** ಎಂದರೆ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ.

3. **ಗ್ರಾಮ ಸಭೆಗಳನ್ನು ಸಮಾವೇಶಗೊಳಿಸುವುದು.–** ಸಮಾವೇಶಕನು ಗ್ರಾಮ ಸಭೆಗಳನ್ನು ಕರೆಯತಕ್ಕದ್ದು. ಸಭೆಯನ್ನು ಕರೆಯಬೇಕಾದ ಅಥವಾ ಗ್ರಾಮ ಪಂಚಾಯಿತಿ ಅಧ್ಯಕ್ಷನು ಸಭೆ ಕರೆಯಲು ವಿಫಲನಾದರೆ, ಕಾರ್ಯ ನಿರ್ವಹಣಾ ಅಧಿಕಾರಿಯು ಅಂಥ ಸಭೆಯ ಸಮಾವೇಶಕನಾಗಿರತಕ್ಕದ್ದು.

4. **ಸಭೆಯ ಮತ್ತು ವ್ಯವಹಾರದ ಸಾರ್ವಜನಿಕ ಸೂಚನೆ.–** ಸಮಾವೇಶಕನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಸಹಾಯದೊಂದಿಗೆ ಗ್ರಾಮ ಸಭೆಯ ಸಾಮಾನ್ಯ ಅಥವಾ ವಿಶೇಷ ಸಭೆಯ ಸಾರ್ವಜನಿಕ ಸೂಚನೆಯನ್ನು, ಸದರಿ ಸಭೆಯ ದಿನಾಂಕದಿಂದ ಕನಿಷ್ಠ ಒಂದು ವಾರ ಮುಂಚಿತವಾಗಿ ಅವಶ್ಯಕತೆ ಬಿದ್ದರೆ ದೂರದರ್ಶನದ ಪ್ರಾದೇಶಿಕ ಚಾನಲ್‌ಗಳ ಮೂಲಕ ರೇಡಿಯೋ ಹಾಗೂ ವಾರ್ತಾ ಪತ್ರಿಕೆಗಳ ಮೂಲಕ ಕರಪತ್ರಗಳು ಮತ್ತು ಪೋಸ್ಟರ್‌ಗಳನ್ನು ಮುದ್ರಿಸುವ ಮೂಲಕ ಗ್ರಾಮ ಪಂಚಾಯಿತಿ ಸೂಚನಾ ಫಲಕದಲ್ಲಿ ಪ್ರದರ್ಶಿಸುವ ಮೂಲಕ ಗ್ರಾಮ ಚಾವಡಿ ಮತ್ತು ಇತರೆ ಎದ್ದು ಕಾಣುವ ಪ್ರದೇಶಗಳಲ್ಲಿ ಪ್ರದರ್ಶಿಸುವ ಮೂಲಕ, ಅಂಥಹ ಸಭೆಯು ನಡೆಯುವ ಸ್ಥಳ ಮತ್ತು ಸಮಯವನ್ನು ನಿರ್ದಿಷ್ಟಪಡಿಸುವ ಸಾರ್ವಜನಿಕ ಸೂಚನೆಯನ್ನು ಹೊರಡಿಸತಕ್ಕದ್ದು. ಇಂತಹ ಪರಿಪತ್ರಗಳು ಸಾಧ್ಯವಾಗಬಹುದಾದಷ್ಟರ ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳ ಪಟ್ಟಿಯನ್ನು ಒಳಗೊಂಡಿರುತಕ್ಕದು.

5. **ಗ್ರಾಮ ಸಭೆಯ ನಡವಳಿಗಳ ದಾಖಲೆ.–** (1)ಗ್ರಾಮ ಸಭೆಯ ನಡವಳಿಗಳು ಕನ್ನಡದಲ್ಲಿರತಕ್ಕದ್ದು; ಒಂದು ವೇಳೆ ಭಾಷಾ ಅಲ್ಪಸಂಖ್ಯಾತರ ಜನಸಂಖ್ಯೆಯು ಶೇಕಡಾ 15 ಮೀರಿದ್ದಲ್ಲಿ ಅಲ್ಪಸಂಖ್ಯಾತರ ಭಾಷೆಯಲ್ಲೂ ಸಹ ಇರತಕ್ಕದ್ದು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಥವಾ ಸಭೆಯ ಸಂಚಾಲಕನೆಂದು ಗೊತ್ತುಪಡಿಸಿದ ಪಂಚಾಯಿತಿಯ ಅಂಥ ಅಧಿಕಾರಿ ಅದೇ ಕಾರಣಕ್ಕಾಗಿ ಒದಗಿಸಲಾದ ಪುಸ್ತಕದಲ್ಲಿ ಸದರಿ ನಡವಳಿಗಳನ್ನು ದಾಖಲಿಸಿ ಓದಿ ಹೇಳಿ ಅಧ್ಯಕ್ಷರಿಂದ ಸಹಿ ಪಡೆಯತಕ್ಕದ್ದು. ಗ್ರಾಮಸಭೆಯ ಸದಸ್ಯರುಗಳ ಹಾಜರಾತಿ ದಾಖಲೆ, ಗ್ರಾಮ ಪಂಚಾಯಿತಿ ಮತ್ತು ಅಧಿಕಾರಿಗಳ ಹಾಜರಾತಿ ದಾಖಲೆಗಳನ್ನು ನಡವಳಿ ಪುಸ್ತಕದಲ್ಲಿ ಇಡತಕ್ಕದ್ದು.

(2)ಗ್ರಾಮಸಭೆಯ ಅಭಿಪ್ರಾಯ, ಶಿಫಾರಸ್ಸು ಅಥವಾ ಸಲಹೆಗಳನ್ನು ಗ್ರಾಮ ಪಂಚಾಯಿತಿಗೆ 24 ಗಂಟೆಗಳಲ್ಲಿ ತಿಳಿಸತಕ್ಕದ್ದು. ಗ್ರಾಮ ಪಂಚಾಯಿತಿಯು ಜನವಸತಿ ಸಭೆಯ ಮತ್ತು ಅಗತ್ಯತೆಗಳನ್ನು ವಾರ್ಡ್‌ಸಭೆಯ ಶಿಫಾರಸ್ಸುಗಳನ್ನು ಮತ್ತು ಸಲಹೆಗಳನ್ನು ಅಗತ್ಯವಾಗಿ ಪರಿಶೀಲಿಸತಕ್ಕದ್ದು.

**6. ಗ್ರಾಮ ಸಭೆಯ ಸಭೆಗಳು.–** ಗ್ರಾಮ ಸಭೆಯ ಒಂದು ಸಾಮಾನ್ಯ ಸಭೆಯು ಕನಿಷ್ಠ ಪ್ರತಿ ಆರು ತಿಂಗಳಿಗೊಮ್ಮೆ ನಡೆಯತಕ್ಕದ್ದು.

ಗ್ರಾಮ ಸಭೆಯ ಸದಸ್ಯರ ಮೂರನೇ ಒಂದು ಭಾಗದ ಸದಸ್ಯರು ಸದಸ್ಯರ ಲಿಖಿತ ಕೋರಿಕೆ ಮೇಲೆ ಗ್ರಾಮ ಸಭೆಯ ಸಮಾವೇಶಕನು ವ್ಯವಹರಿಸಬೇಕಾದ ವ್ಯವಹಾರದ ಬಗ್ಗೆ ನಿರ್ದಿಷ್ಟಪಡಿಸಿ ವಿಶೇಷ ಸಭೆಯನ್ನು ಕರೆಯತಕ್ಕದ್ದು. ಗ್ರಾಮ ಸಭೆಯ ಸಮಾವೇಶಕನು ಗ್ರಾಮ ಸಭೆಯ ಸಭೆಗಳನ್ನು ಸಮಾವೇಶಗೊಳಿಸಲು ವಿಫಲವಾದಾಗ ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಥವಾ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯು ಅಂಥ ವಿಶೇಷ ಸಭೆಯನ್ನು ಕರೆಯತಕ್ಕದ್ದು ಮತ್ತು ವಿಶೇಷ ಸಭೆಯನ್ನು ಸಮಾವೇಶಗೊಳಿಸಲು ಅವಶ್ಯಕವಾದ ಕ್ರಮಗಳನ್ನು ತೆಗೆದುಕೊಳ್ಳುವಂತೆ ನಿರ್ದೇಶಿಸತಕ್ಕದ್ದು.

**7. ಸಭೆಯ ಮತ್ತು ವ್ಯವಹಾರದ ಸಾರ್ವಜನಿಕ ಸೂಚನೆ.–** ಗ್ರಾಮ ಸಭೆಯ ಸಮಾವೇಶಕನು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಸಹಾಯದೊಂದಿಗೆ ಸಾಮಾನ್ಯ ಅಥವಾ ವಿಶೇಷ ಸಭೆಯ ಸಾರ್ವಜನಿಕ ಸೂಚನೆಯನ್ನು ಸಭೆಯ ದಿನಾಂಕದಿಂದ ಕನಿಷ್ಠ ಎರಡು ವಾರ ಮುಂಚಿತವಾಗಿ, ಅವಶ್ಯಕತೆ ಬಿದ್ದರೆ ನಿಯಮ 4 ರಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸಾರ್ವಜನಿಕ ಪ್ರಕಟಣೆಗಳ ಮೂಲಕ ಅಥವಾ ಟಾಂ ಟಾಂ ಮಾಡುವ ಮೂಲಕ ಅಥವಾ ಗ್ರಾಮ ಚಾವಡಿ ಮತ್ತು ಇತರೆ ಎದ್ದು ಕಾಣುವ ಪ್ರದೇಶಗಳಲ್ಲಿ ಪ್ರದರ್ಶಿಸುವ ಮೂಲಕ ಅಂತಹ ಸಭೆಯು ನಡೆಯುವ ಸ್ಥಳ ಮತ್ತು ಸಮಯವನ್ನು ನಿರ್ದಿಷ್ಟಪಡಿಸುವ ಸಾರ್ವಜನಿಕ ಸೂಚನೆಯನ್ನು ಹೊರಡಿಸತಕ್ಕದ್ದು.

**8. ಗ್ರಾಮ ಸಭೆಯ ಸಭೆಗಳಲ್ಲಿ ತೆಗೆದುಕೊಳ್ಳಬೇಕಾದ ವಿಷಯಗಳು:–**ಪ್ರಕರಣ 3–ಎ ಯ ಉಪ ಪ್ರಕರಣ (2) ರಲ್ಲಿ ಸೂಚಿಸಿರುವ ಪ್ರಕಾರ್ಯಗಳ ಜೊತೆಗೆ ಗ್ರಾಮಸಭೆಯು ಸಾಮಾನ್ಯ ಸಭೆಗಳಲ್ಲಿ ಈ ಕೆಳಗಿನ ವಿಸ್ತೃತ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಅಂದರೆ.–

**(ಎ).** ಮೊದಲ ತ್ರೈಮಾಸಿಕ ಸಭೆ/ಹಿಂದಿನ ವರ್ಷದ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಗಣಿಸುವುದು.

**(ಬಿ).** ಎರಡನೇ ತ್ರೈಮಾಸಿಕ ಸಭೆ/ಈ ಸಭೆಯು ಪಂಚಾಯತ್ ಜಮಾಬಂಧಿ ಸಭೆಯಾಗಿರತಕ್ಕದ್ದು; ಹಿಂದಿನ ವರ್ಷಕ್ಕೆ ಸಂಬಂಧಿಸಿದ ಲೆಕ್ಕ ಪರಿಶೋಧನಾ ವರದಿಯನ್ನು ಪರಿಗಣಿಸತಕ್ಕದ್ದು ಮತ್ತು ಪಂಚಾಯತ್ ಜಮಾಬಂಧಿ ನಿಯಮಗಳಿಗೆ ಅನುಸಾರವಾಗಿ ನಡೆಸತಕ್ಕದ್ದು.

**(ಸಿ).** ಮೂರನೇ ತ್ರೈಮಾಸಿಕ ಸಭೆ/ ಪಂಚಾಯಿತಿಯು ನಡೆಸುತ್ತಿರುವ ಕಾಮಗಾರಿಗಳ ಪ್ರಗತಿಯ ನಿಗಾವಹಿಸುವುದು ಮತ್ತು ಮುಂದಿನ ವರ್ಷದ ಅಭಿವೃದ್ಧಿ ಯೋಜನೆಯ ಆರಂಭಿಕ ಚರ್ಚೆ;

**(ಡಿ).** ನಾಲ್ಕನೇ ತ್ರೈಮಾಸಿಕ ಸಭೆ/ ಪಂಚಾಯಿತಿಯ ಚಾಲ್ತಿಯಲ್ಲಿರುವ ಕೆಲಸಗಳ ನಿಗಾ ವಹಿಸುವುದು ಮತ್ತು ಮುಂದಿನ ವರ್ಷದ ಅಭಿವೃದ್ಧಿ ಯೋಜನೆಗಳ ಅಂತಿಮಗೊಳಿಸುವಿಕೆ.

**9. ಗ್ರಾಮ ಸಭೆಯಲ್ಲಿಯ ವಿಷಯಗಳನ್ನು ನಿರ್ಣಯಿಸುವ ವಿಧಾನ.–** ಗ್ರಾಮ ಸಭೆಯಿಂದ ನಿರ್ಣಯಿಸಲಾದ ಅಥವಾ ನಿರ್ಣಯಿಸಲಾದ ಎಲ್ಲಾ ವಿಷಯಗಳೂ ಮತದಾನದ ವೇಳೆಯಲ್ಲಿ ಹಾಜರಿದ್ದ ಸದಸ್ಯರ ಬಹುಮತದಿಂದ ಅಂಗೀಕರಿಸತಕ್ಕದ್ದು.

**10. ಗ್ರಾಮ ಸಭೆಯ ಸಭೆಯಲ್ಲಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳ ಉಪಸ್ಥಿತಿ.–**(1)ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಪಂಚಾಯಿತಿಯ ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳು ಗ್ರಾಮ ಸಭೆಯ ಸಾಮಾನ್ಯ ಸಭೆಗಳಲ್ಲಿ ಹಾಜರಿರತಕ್ಕದ್ದು.

(2) ಗ್ರಾಮ ಸಭೆಯ ಎಲ್ಲಾ ಸಾಮಾನ್ಯ ಸಭೆಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಯು ಹಾಜರಿರತಕ್ಕದ್ದು. ಒಂದು ವೇಳೆ ಸಮಾವೇಶಕರಿಗೆ ಪಂಚಾಯಿತಿಯ ಇತರೆ ಯಾವುದಾದರೂ ಅಧಿಕಾರಿಯ ಹಾಜರಾತಿಯು ಅವಶ್ಯಕತೆ ಇದೆ ಎನಿಸಿದಲ್ಲಿ, ಸಮಾವೇಶಕನು ಅಂತಹ ಅಧಿಕಾರಿಗೆ ಪತ್ರ ಬರೆದು ಸಭೆಯಲ್ಲಿ ಅಂಥ ಅಧಿಕಾರಿಯು ಹಾಜರಿರುವಂತೆ ಕೋರತಕ್ಕದ್ದು ಮತ್ತು ಅಂಥ ಅಧಿಕಾರಿಯು ಆ ಸಭೆಯಲ್ಲಿ ಹಾಜರಿರತಕ್ಕದ್ದು. ಸಕಾರಣವಿಲ್ಲದೇ ಗೈರುಹಾಜರಾಗುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸು ಮಾಡಬಹುದು. ಆದರೆ ಪ್ರತಿ ಗ್ರಾಮಸಭೆಯಲ್ಲಿ ಈ ಕೆಳಕಂಡ ಅಧಿಕಾರಿಗಳು ಹಾಜರಿರುವುದು ಅವಶ್ಯಕವಾಗಿದೆ, ಅಂದರೆ.–

(ಎ) ಗ್ರಾಮದಲ್ಲಿನ ಪ್ರತಿ ಶಾಲೆಯಲ್ಲಿನ ಮುಖ್ಯೋಪಾಧ್ಯಾಯರು;

(ಬಿ) ಗ್ರಾಮೀಣ ಶಿಕ್ಷಣ ಸಮಿತಿಯ ಅಧ್ಯಕ್ಷರು;

(ಸಿ) ಸಂಬಂಧಿಸಿದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ;

(ಡಿ) ಸಂಬಂಧಿಸಿದ ಪಶು ಚಿಕಿತ್ಸಾಲಯದ ಪಶು ವೈದ್ಯ ಅಥವಾ ಸಹಾಯಕ;

(ಇ) ಸಂಬಂಧಿತ ವಾಣಿಜ್ಯ ಬ್ಯಾಂಕು ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಮ್ಯಾನೇಜರ್;

(ಎಫ್) ಸಂಬಂಧಿತ ಸಹಾಯಕ ಕೃಷಿ ಅಧಿಕಾರಿಯ ಕೃಷಿ ಸಹಾಯಕ;

(ಜಿ) ಸಂಬಂಧಿತ ಗ್ರಾಮ ಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕ;

(ಹೆಚ್) ಅಂಗನವಾಡಿ ಕಾರ್ಯಕರ್ತರು;

(ಐ) ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯ ಅಧ್ಯಕ್ಷ;

(ಜೆ) ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ಸಂಬಂಧಪಟ್ಟ ಅಭಿಯಂತರರು;

(ಕೆ) ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ಕುಡಿಯುವ ನೀರಿನ ಯೋಜನೆಯ ಸಂಬಂಧಪಟ್ಟ ಅಭಿಯಂತರರು;

(ಎಲ್) ಸಂಬಂಧಿತ ತೋಟಗಾರಿಕೆ ಸಹಾಯಕ, ಮೀನುಗಾರಿಕೆ ಸಹಾಯಕ ಹಾಗೂ ರೇಷ್ಮೆ ಇಲಾಖೆಯ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿ ಮತ್ತು

(ಎಮ್) ಅಧ್ಯಕ್ಷರು ಸೂಚಿಸಬಹುದಾದ ಇನ್ನಿತರ ಅಧಿಕಾರಿಗಳು;

**11. ನಿರಸನಗೊಳಿಸುವಿಕೆ:–** ಕರ್ನಾಟಕ ಪಂಚಾಯತ್ ರಾಜ್ (ವಾರ್ಡ್‌ಸಭೆ ಮತ್ತು ಗ್ರಾಮಸಭೆ) ನಿಯಮಗಳು, 2004ನ್ನು ನಿರಸನಗೊಳಿಸಲಾಗಿದೆ.

ಪರಂತು, ಸದರಿ ನಿರಸನವು ಸದರಿ ನಿಯಮಗಳನ್ನು ಈ ಹಿಂದೆ ಜಾರಿಗೊಳಿಸುವುದನ್ನು ಅಥವಾ ಅವುಗಳಡಿಯಲ್ಲಿ ಯಥೋಚಿತವಾಗಿ ಮಾಡಿದ ಅಥವಾ ಅದರಿಂದ ಅನುಭವಿಸಿದ ಯಾವುದೇ ವಿಷಯಕ್ಕೆ ಬಾಧೆ ಉಂಟುಮಾಡತಕ್ಕದ್ದಲ್ಲ ಅಥವಾ ಸದರಿ ನಿಯಮಗಳಡಿಯಲ್ಲಿ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ಹೊಣೆಗಾರಿಕೆ ಅಥವಾ ಬಾಧ್ಯತೆಗೆ ಬಾಧೆಯನ್ನುಂಟುಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ವಿ. ಅರುಣ್‌ಕುಮಾರ್**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.